ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.1684/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಸತ್ಯನಾರಾಯಣ | | |
| ತಂದೆಃಹೆಸರು | ರಾಮಾರಾವ್ | ಪಿಡಬ್ಲೂಃ | 11 |
| ವಯಸ್ಸು | 48 ವರ್ಷ | ಸಿಡಬ್ಲೂಃ | 9 |
| ಉದ್ಯೋಗಃ | ವ್ಯವಸಾಯ | | |
| ವಾಸ ಸ್ಥಳಃ | 7 ಮೈಲಿ ಕ್ಯಾಂಪ್. | | |

**ದಿನಾಂಕ 16-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಸಾಕ್ಷಿಗೆ ನಿಪಿ-21 ಪಂಚನಾಮೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-21 ಸಿ ಎಂದು ಗುರುತಿಸಲಾಯಿತು.

ಸುಮಾರು 2 ವರ್ಷಗಳ ಹಿಂದೆ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿತ್ತು. ಮುಂದೆ ಏನಾಗಿತ್ತು ಎಂದು ನನಗೆ ನೆನಪಿಲ್ಲ. ನಿಪಿ-21 ರಲ್ಲಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ-6 ರಲ್ಲಿರುವ ತಮ್ಮನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ**

ದಿಃ19-01-2022 ರಂದು ಮ. 3 ರಿಂದ 4 ಗಂಟೆಯವರೆಗೆ ಚಾಸಾ-1 ರವರ ಮನೆಯಲ್ಲಿ ನಿಮ್ಮ & ಚಾಸಾ-8 ರವರ ಸಮಕ್ಷಮ 2ನೇ ಆರೋಪಿ ತೋರಿಸಿದ ಕೃತ್ಯದ ಸ್ಥಳದಲ್ಲಿ ನಿಪಿ-21 ರಂತೆ ಸ್ಥಳ ಪಂಚನಾಮೆ ಮಾಡಿ, ನಿಪಿ-6 ನ್ನ ತೆಗೆದಿದ್ದರು ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ಪೋಲೀಸರು ಪಂಚನಾಮೆಗೆ ಬಂದು ಸಹಾಯ ಮಾಡಲು ನನಗೆ ನೋಟೀಸು ಕೊಟ್ಟಿರಲಿಲ್ಲ. ಪೋಲೀಸರು ಪಂಚನಾಮೆ ಮಾಡಿದ ಸಮಯ ನನಗೆ ಗೊತ್ತಿಲ್ಲ. ಪೋಲೀಸರು ಹಾಳೆ ಕೊಟ್ಟು ಸಹಿ ಮಾಡು ಎಂದಿದ್ದರಿಂದ ನೀವು ಸಹಿ ಮಾಡಿದ್ದೀರಿ ಎಂದರೆ ಸರಿ.

2. ನಿಪಿ 6 ರಲ್ಲಿ ಮಾಸ್ಕ್ ಹಾಕಿಕೊಂಡಿದ್ದರಿಂದ ಅದು ನೀವೇ ಎಂದು ಗುರುತಿಸಲಾಗುವುದಿಲ್ಲ ಎಂದರೆ ಸರಿ. ನಿಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಪೋಲೀಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೀರಿ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**